


**2019 ಆಗಸ್ಟ್ 29ರಂದು ಶಾಂಘೈನಲ್ಲಿ ನಡೆದ 'ವಿಶ್ವ ಕೃತಕ ಬುದ್ಧಿಮತ್ತೆ ಸಮ್ಮೇಳನ'ದಲ್ಲಿ ಕಂಡುಬಂದ ಸ್ವಯಂಚಾಲಿತ ಕಾರು.**

ಜಾರಿ ಮಾಡಿದೆ. ಎಐ ತಂತ್ರಜ್ಞಾನ ಬೋಧಿಸುವ ಕಾಲೇಜುಗಳು, ಕೋರ್ಸುಗಳು ನಾಯಿಕೊಡೆಗಳಂತೆ ಎಲ್ಲೆಂದರಲ್ಲಿ ಹುಟ್ಟಿವೆ.

## 'ಎಐ' ತಂತ್ರಜ್ಞಾನದ ಹಕ್ಕುಸ್ವಾಮ್ಯ

'ಎಐ' ತಂತ್ರಜ್ಞಾನದ 9,000 ಪೇಟೆಂಟ್ ಹೊಂದಿರುವ 'ಐಬಿಎಂ' ಕಂಪನಿ 'ಎಐ' ಹಕ್ಕುಸ್ವಾಮ್ಯ ಹೊಂದಿದ ವಿಶ್ವದ ಏಕೈಕ ದೊಡ್ಡ ಕಂಪನಿ. 6,000 ಪೇಟೆಂಟ್ ಹೊಂದಿರುವ ಮೈಕ್ರೋಸಾಫ್ಟ್ ಎರಡನೇ ಸ್ಥಾನದಲ್ಲಿದೆ. ಪೇಟೆಂಟ್ ಹೊಂದಿರುವ ಮೊದಲ ಇಪ್ಪತ್ತು ಕಂಪನಿಗಳಲ್ಲಿ ಜಪಾನ್‌ನ 12, ಅಮೆರಿಕದ ಮೂರು ಮತ್ತು ಚೀನಾದ ಎರಡು ಕಂಪನಿಗಳಿವೆ. ಯುನಿವರ್ಸಿಟಿಗಳ ಪೈಕಿ ಚೀನಾದ ಅಕಾಡೆಮಿ ಆಫ್ ಸೈನ್ಸ್ 14 ಸಾವಿರ ಪೇಟೆಂಟ್ ಅಪ್ಲಿಕೇಶನ್ ಹೊಂದಿದೆ. ಲಭ್ಯವಿರುವ ಪೇಟೆಂಟ್‌ಗಳಲ್ಲಿ ಅರ್ಧದಷ್ಟು ಭದ್ರತೆಗೆ ಸಂಬಂಧಿಸಿದ ಕಂಪ್ಯೂಟರ್ ವಿಷನ್ 'ಎಐ' ಸಾಧನೆಗಳದ್ದಾಗಿದೆ. ಉಳಿದವು ಮೆಶೀನ್ ಲರ್ನಿಂಗ್, ಡೀಪ್ ಲರ್ನಿಂಗ್, ವಾಯ್ಸ್ ಪ್ರೋಸೆಸಿಂಗ್ ಮತ್ತು ಲಾಂಗ್ವೇಜ್ ಪ್ರೋಸೆಸಿಂಗ್‌ಗೆ ಸಂಬಂಧಿಸಿವೆ.

ಸ್ವಿಟ್ಜರ್‌ಲೆಂಡಿನಲ್ಲಿರುವ 'ವರ್ಲ್ಡ್ ಇಂಟೆಲೆಕ್ಚುಯಲ್ ಪ್ರಾಪರ್ಟಿ ಆರ್ಗನೈಸೇಶನ್' (WIPO) ವಿವಿಧ ದೇಶಗಳಲ್ಲಿ ತನ್ನ ಶಾಖೆ ಹೊಂದಿದ್ದು ಪೇಟೆಂಟಿಂಗ್ ಕೆಲಸ ಮಾಡುತ್ತದೆ. ಇದುವರೆಗೆ 3,44,000 ಪೇಟೆಂಟ್ ಅಪ್ಲಿಕೇಶನ್‌ಗಳು ದಾಖಲಾಗಿದ್ದು, 16 ಲಕ್ಷ ಸಂಶೋಧನಾ ಪ್ರಬಂಧಗಳು ಪ್ರಕಟಗೊಂಡಿವೆ. ಮೈಕ್ರೋಸಾಫ್ಟ್, ಐಬಿಎಂ ಮತ್ತು ಸ್ಯಾಮ್‌ಸಂಗ್‌ಗಳು ಖಾಸಗೀ 'ಎಐ' ಸಾಧನಗಳ ಪೇಟೆಂಟ್‌ಗೆ ಹೆಚ್ಚು ಒತ್ತು ನೀಡಿವೆ.

'ಎಐ' ತಂತ್ರಜ್ಞಾನ ಪ್ರಜಾಪ್ರಭುತ್ವದ ಬುಡವನ್ನೇ ಅಲ್ಲಾಡಿಸಬಲ್ಲದು ಎನ್ನುವ ಪತ್ರಿಕೆಗಳು, ಚೀನಾ ನಡೆಸುತ್ತಿರುವ 'ಎಐ' ಕೆಲಸದ ಕುರಿತು ಗಮನ ಸೆಳೆಯುತ್ತವೆ. ಮೈಕ್ರೋಸಾಫ್ಟ್ ಕಂಪನಿ ಚೀನಾದ ಮಿಲಿಟರಿ ಯುನಿವರ್ಸಿಟಿಯ ಜೊತೆ ಸೇರಿ ತಯಾರಿಸುತ್ತಿರುವ 'ಎಐ' ಸಲಕರಣೆಗಳು ದೇಶದ ಪ್ರಜೆಗಳ ಮೇಲೆ ತೀವ್ರ ಕಣ್ಗಾವಲು ಇಟ್ಟು ಅವರ ಖಾಸಗಿ ಮಾಹಿತಿಯನ್ನು ಕಲೆ ಹಾಕಿ ತನ್ನ ಪ್ರಭುತ್ವದ ವಿರುದ್ಧ ದನಿ ಎತ್ತಿದ್ದಾರೆ ಎಂದು ಪರಿಗಣಿಸಿ ಸುಮಾರು 20 ಲಕ್ಷ ಜನರನ್ನು ಜೈಲಿಗೆ ತಳ್ಳಿದೆ. ಚೀನಾದ ಕ್ಸಿಂಜಿಯಾಂಗ್ ಪ್ರಾಂತ್ಯ ವಿಶ್ವದ ನೂರಕ್ಕೆ ನೂರರಷ್ಟು ಕಣ್ಗಾವಲಿರುವ ಪ್ರದೇಶ ಎಂದು ಖ್ಯಾತಿ ಪಡೆದಿದೆ. ಅಲ್ಲಿ ವಾಸಿಸುವ ಪ್ರತಿಯೊಬ್ಬ ಪ್ರಜೆಯ ಚಲನವಲನಗಳ ಮೇಲೆ ಕಣ್ಣಿಟ್ಟಿರುವ ಸರ್ಕಾರ ಮೊಬೈಲ್ ಫೋನ್‌ನ ಪ್ರತೀ ಮಾಹಿತಿಯನ್ನೂ ದಿನ ನಿತ್ಯ ಹೊಕ್ಕು ನೋಡುತ್ತಿದೆ. ಚೀನಾದಷ್ಟೇ ಉತ್ಸುಕವಾಗಿರುವ ಅಮೆರಿಕ ತನ್ನ FBI, CIA, NSAಗಳಿಗೆ 'ಎಐ'ನ ಬಲ ತುಂಬಿ ಸರ್ಕಾರದ ವಿರುದ್ಧ ಮಾತನಾಡುವ ಮೂಲ ಅಮೆರಿಕನ್ನರನ್ನು ಹದ್ದುಬಸ್ತಿನಲ್ಲಿಡಲು ತಯಾರಿ ಮಾಡಿಕೊಂಡಿದೆ.

## ಮುಂದೇನು?

ಇನ್ನೈದು ವರ್ಷಗಳಲ್ಲಿ 'ಎಐ' ಉದ್ಯಮದ ವಹಿವಾಟು 40 ಶತಕೋಟಿ ಡಾಲರ್ ತಲುಪಲಿದೆ. ಗೂಗಲ್, ಉಬರ್‌ನಂಥ ತಂತ್ರಜ್ಞಾನ ಕಂಪನಿಗಳು, ಸಾಂಪ್ರದಾಯಿಕ ಆಟೋ ಕಂಪನಿಗಳಾದ ಟೊಯೊಟಾ, ಜನರಲ್ ಮೋಟಾರ್ಸ್, ವೋಕ್ಸ್ ವಾಗನ್‌ಗಳು ಸದ್ಯ ಚಾಲಕರಹಿತ ಕಾರುಗಳ ತಯಾರಿಕೆಯಲ್ಲಿ ಮಗ್ನವಾಗಿವೆ. 2026ರ ವೇಳೆಗೆ ಅಮೆರಿಕದ ಶೇ. 10ರಷ್ಟು ಕಾರುಗಳಿಗೆ ಚಾಲಕನ ಅಗತ್ಯವಿಲ್ಲ ಎಂಬ ಅಂದಾಜಿದೆ. ಪ್ರವರ್ಧಮಾನಕ್ಕೆ ಬರುತ್ತಿರುವ 'ಎಐ' ಇನ್ನು ಐದೇ ವರ್ಷಗಳಲ್ಲಿ ಎಲ್ಲ ವೈಟ್‌ಕಾಲರ್ ಉದ್ಯೋಗಗಳನ್ನು ಕಬಳಿಸಲಿದೆ ಎನ್ನಲಾಗಿದೆ. 2026ರ ಹೊತ್ತಿಗೆ ಕಾರ್ಪೊರೇಟ್ ಮೀಟಿಂಗ್‌ಗಳಲ್ಲಿ 'ಎಐ' ಯಂತ್ರಗಳೇ ಪಾಲ್ಗೊಳ್ಳುತ್ತವೆ.

ಭಾರತ ತನ್ನ ಸೇನೆಯ ಮೂರೂ ಪಡೆಗಳಲ್ಲಿ ಕೃತಕ ಬುದ್ಧಿಮತ್ತೆಯನ್ನು ಅಳವಡಿಸಿಕೊಳ್ಳಲು ನಿರ್ಧರಿಸಿ ಭವಿಷ್ಯದ ಯುದ್ಧತಂತ್ರ ಕಲಿಯಲು ಭಾರೀ ಯೋಜನೆ ರೂಪಿಸಿದೆ. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆಯನ್ನು ಐಚ್ಛಿಕ ವಿಷಯವನ್ನಾಗಿ ಆರಂಭಿಸಲು 'ಸಿಬಿಎಸ್‌ಇ' ನಿರ್ಧರಿಸಿದೆ.

ಒಂದು ಕಾಲದಲ್ಲಿ ಕಂಪ್ಯೂಟರ್ ಸಂಶೋಧನೆಯಿಂದ ಮಾನವಕುಲ ನಶಿಸಿಹೋಗುತ್ತದೆ ಎಂಬ ಅಭಿಪ್ರಾಯ ಬಲವಾಗಿತ್ತು. ಆದರೀಗ ಮನುಷ್ಯ ಮತ್ತು ಕಂಪ್ಯೂಟರ್ ಎರಡೂ ಇನ್ನಿಲ್ಲದಂತೆ ಹೊಂದಿಕೊಂಡಿವೆ. ಬದಲಾವಣೆ ಜಗತ್ತಿನ ನಿಯಮ ಅದನ್ನು ಸ್ವೀಕರಿಸುತ್ತಾ, ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಹುಡುಕುತ್ತಾ ಸಾಗುವುದೇ ಪ್ರಗತಿಯ ಲಕ್ಷಣ. ಅದು ಮುಂದುವರೆಯಲೇಬೇಕು. ಈ ತಾತ್ವಿಕತೆ ಕೃತಕ ಬುದ್ಧಿಮತ್ತೆ ಕುರಿತಾದ ತಕರಾರುಗಳಿಗೂ ಅನ್ವಯಿಸುತ್ತದೆ.

ಅಂದಹಾಗೆ, ಮನುಕುಲಕ್ಕೆ ಬಹುದೊಡ್ಡ ಆತಂಕ ಇರುವುದು 'ಕೃತಕ ಬುದ್ಧಿಮತ್ತೆ'ಯಿಂದಲ್ಲ – 'ಕೃತ್ರಿಮ ಬುದ್ಧಿಮತ್ತೆ'ಯಿಂದ. ಈ ಕೃತ್ರಿಮತೆ ಯಂತ್ರಗಳಿಗೆ ಸಂಬಂಧಿಸಿದ್ದಲ್ಲ, ನಮಗೆ ಸಂಬಂಧಿಸಿದ್ದು, ನಮ್ಮೊಳಗೇ ರೂಪುಗೊಳ್ಳುವಂತಹದ್ದು.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in